ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1077 |
| ಉತ್ತರಿಸುವ ಸಚಿವರು | : | ಮಾನ್ಯ ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 21-09-2021 |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಜವಳಿ ಇಲಾಖೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಿಗಮಗಳ ಸಂಖ್ಯೆ ಎಷ್ಟು; ಸದರಿ ನಿಗಮಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರ ದಿಂದ ಯಾವ ರೀತಿಯಲ್ಲಿ ಅನುದಾನ ನೀಡ ಲಾಗುತ್ತಿದೆ; (ಅಂಕಿ ಅಂಶ ಗಳನ್ನು ಒದಗಿಸುವುದು).</td><td>
ಕೈಮಗ್ಗ ಮತ್ತು ಜವಳಿ ಇಲಾಖೆ ವ್ಯಾಪ್ತಿಯಲ್ಲಿ 02 ನಿಗಮಗಳು ಕಾರ್ಯನಿರ್ವಹಿಸುತ್ತಿದ್ದು, ವಿವರ ಈ ಕೆಳಕಂಡಂತಿವೆ:-
1) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಹುಬ್ಬಳ್ಳಿ.<br>2)ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ(ಕೆ.ಎಸ್.ಟಿ.ಐ.ಡಿ.ಸಿ) ಬೆಳಗಾವಿ.
<u>ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ:-</u><br>ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ನೇಕಾರರಿಗೆ ಸರಬರಾಜು ಮಾಡುವ ಕಚ್ಚಾನೂಲು ಖರೀದಿಗಾಗಿ ಪ್ರೋತ್ಸಾಹಧನ, ನಿಗಮವು ಬ್ಯಾಂಕುಗಳಿಂದ ಪಡೆಯುವ ಸಾಲಕ್ಕೆ ಬಡ್ಡಿ ರಿಯಾಯಿತಿ ಹಾಗೂ ನೇಕಾರರಿಂದ ತಯಾರಾಗುವ ಬಟ್ಟೆ ಮಾರಾಟದ ಮೇಲೆ ಶೇ.20 ರಷ್ಟು ಸಹಾಯಧನವನ್ನು ರಾಜ್ಯ ಸರ್ಕಾರವು ಪ್ರತಿ ವರ್ಷ ನೇಕಾರರ ಪ್ಯಾಕೇಜ್ ಯೋಜನೆಯಡಿ ಅನುದಾನ ಒದಗಿಸುತ್ತಿದ್ದು, ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಒದಗಿಸುತ್ತಿಲ್ಲ.
ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರವು ಈವರೆವಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳು ಈ ಕೆಳಗಿನಂತಿವೆ:
(ರೂ.ಲಕ್ಷಗಳಲ್ಲಿ)
<table>
<tr><th>ಆರ್ಥಿಕ ವರ್ಷ</th><th>ಬಿಡುಗಡೆ ಮಾಡಲಾದ ಅನುದಾನ</th></tr>
<tr><td>2018-19</td><td>939.00</td></tr>
<tr><td>2019-20</td><td>2000.00</td></tr>
<tr><td>2020-21</td><td>4000.00</td></tr>
</table>
<u>ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ:-</u><br>ರಾಜ್ಯ ಸರ್ಕಾರದಿಂದ ಈ ನಿಗಮಕ್ಕೆ ಕಳೆದ ಎರಡು ವರ್ಷಗಳಲ್ಲಿ ಒದಗಿಸಲಾದ ಅನುದಾನದ ವಿವರಗಳು ಈ ಕೆಳಗಿನಂತಿದೆ:-
(ರೂ.ಲಕ್ಷಗಳಲ್ಲಿ)
<table>
<tr><th>ಆರ್ಥಿಕ ವರ್ಷ</th><th>ಒದಗಿಸಲಾದ ಅನುದಾನದ ವಿವರ</th></tr>
<tr><td>2019-20</td><td>100.00</td></tr>
<tr><td>2020-21</td><td>2500.00</td></tr>
</table>
</td></tr>
</table>

| | | |
|---|---|---|
| | | ಕೇಂದ್ರ ಸರ್ಕಾರದಿಂದ ನಿಗಮದ ಅಧೀನ ಸಂಸ್ಥೆಗಳಾದ ವಿದ್ಯುತ್ ಮಗ್ಗ ಸೇವಾ ಕೇಂದ್ರ, ಬೆಂಗಳೂರು, ದೊಡ್ಡಬಳ್ಳಾಪುರ, ಗದಗ-ಬೆಟಗೇರಿ, ಬೆಳಗಾವಿ ಜಿಲ್ಲೆಗಳಿಗೆ ಗ್ರಾಂಟ್ ಇನ್ ಏಡ್ ಆಗಿ ರೂ.54.00 ಲಕ್ಷಗಳನ್ನು ಪ್ರತಿ ವರ್ಷ ಬಿಡುಗಡೆ ಮಾಡಲಾಗುತ್ತಿದೆ. |
| ಆ) | ಕೈಮಗ್ಗ ಹಾಗೂ ವಿದ್ಯುತ್ ಮಗ್ಗದಿಂದ ನೇಯ್ದ ಬಟ್ಟೆಗಳನ್ನು ಯಾವ ರೀತಿಯಲ್ಲಿ ವಿಲೇವಾರಿ ಮಾಡಲಾಗುತ್ತಿದೆ; ಹಾಗೂ ಉತ್ಪಾದನೆಯ ಮತ್ತು ಬೇಡಿಕೆಗಳ ಅಂತರ ಯಾವ ರೀತಿಯಲ್ಲಿದೆ ಇದರ ಪರಿಣಾಮವಾಗಿ ರಾಜ್ಯದ ನೇಕಾರರ ಸಮಸ್ಯೆಗೆ ಸರ್ಕಾರ ಯಾವ ರೀತಿಯಲ್ಲಿ ಪರಿಹಾರ ಒದಗಿಸುತ್ತಿದೆ. | **ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ:-**<br>ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಬಹುತೇಕ ನೇಕಾರರು ವಿದ್ಯಾ ವಿಕಾಸ ಯೋಜನೆಯಡಿ ಶಿಕ್ಷಣ ಇಲಾಖೆಗೆ ಅವಶ್ಯವಿರುವ ಸಮವಸ್ತ್ರ ಬಟ್ಟೆಗಳನ್ನು ಉತ್ಪಾದಿಸುತ್ತಿದ್ದು, ಶಿಕ್ಷಣ ಇಲಾಖೆಯ ಬೇಡಿಕೆಗನುಗುಣವಾಗಿ ಬೆಂಗಳೂರು ಮತ್ತು ಕಲಬುರಗಿ ವಿಭಾಗಗಳಿಗೆ ಸರಬರಾಜು ಮಾಡಲಾಗುತ್ತಿದೆ. ಇದಲ್ಲದೇ ಚಿಲ್ಲರೆ ಮಾರಾಟಕ್ಕೆ ಬೇಕಾಗುವ ವಿವಿಧ ನಮೂನೆಯ ಬಟ್ಟೆಗಳನ್ನೂ ಸಹ ಉತ್ಪಾದಿಸಲಾಗುತ್ತಿದ್ದು, ಸದರಿ ಬಟ್ಟೆಗಳನ್ನು ನಿಗಮದ ಪ್ರಿಯದರ್ಶಿನಿ ಮಾರಾಟ ಮಳಿಗೆಗಳ ಮುಖಾಂತರ ಮಾರಾಟ ಮಾಡಲಾಗುತ್ತಿದೆ. ಉತ್ಪಾದನೆ ಹಾಗೂ ಬೇಡಿಕೆಗಳಲ್ಲಿ ಯಾವುದೇ ಅಂತರ ಇರುವುದಿಲ್ಲ.<br><br>**ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ:-**<br>ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ ವಿದ್ಯುತ್ ಮಗ್ಗಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ಬಹುತೇಕ ಮಗ್ಗಗಳಲ್ಲಿ ಪಾಲಿಯಸ್ಟರ್ ಸೀರೆಗಳನ್ನು ಉತ್ಪಾದನೆ ಮಾಡಲಾಗುತ್ತಿದ್ದು ಸ್ಥಳೀಯ ಮಾರುಕಟ್ಟೆಯಲ್ಲಿ ಅವುಗಳ ವಿಲೇವಾರಿ ಮಾಡಲಾಗುತ್ತಿದೆ.<br><br>ಶಿಕ್ಷಣ ಇಲಾಖೆಯ ಮೂಲಕ ವಿದ್ಯಾ ವಿಕಾಸ ಯೋಜನೆಯಡಿ ಸರ್ಕಾರಿ ಶಾಲಾ ಮಕ್ಕಳಿಗೆ ಪೂರೈಸಲಾಗುತ್ತಿರುವ ಸಮವಸ್ತ್ರ ಬಟ್ಟೆಯನ್ನು ನಿಗಮದ ವತಿಯಿಂದ ಕಳೆದ 20 ವರ್ಷಗಳಿಂದ ಸರಬರಾಜು ಮಾಡಲಾಗುತ್ತಿದೆ. |
| ಇ) | ಸದರಿ ನಿಗಮಗಳು ನೇಕಾರರಿಂದ ಪಡೆದ ಬಟ್ಟೆಗಳನ್ನು ಮಾರಾಟ ಮಾಡಲು ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಇತರೆ ಇಲಾಖೆಗಳಿಂದ ನೇರವಾಗಿ ಸಹಕಾರ ಪಡೆಯಲು ಸರ್ಕಾರ ಯಾವ ಕ್ರಮಗಳನ್ನು ಹಮ್ಮಿಕೊಂಡಿದೆ? | **ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ:-**<br>ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಕೆ.ಟಿ.ಪಿ.ಪಿ ಕಾಯಿದೆ 4(ಹೆಚ್)ಅಡಿಯಲ್ಲಿ ಈ ಕೆಳಕಂಡ ಸರ್ಕಾರದ ವಿವಿಧ ಇಲಾಖೆಗಳ ಬೇಡಿಕೆಗನುಗುಣವಾಗಿ ಬಟ್ಟೆಗಳನ್ನು ಸರಬರಾಜು ಮಾಡಲಾಗುತ್ತಿದೆ:-<br><br>1. ಶಿಕ್ಷಣ ಇಲಾಖೆ<br>2. ಆರೋಗ್ಯ ಇಲಾಖೆ<br>3. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ<br>4. ಸಮಾಜ ಕಲ್ಯಾಣ ಇಲಾಖೆ<br>5. ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ<br>6. ಉದ್ಯೋಗ ಮತ್ತು ತರಬೇತಿ ಇಲಾಖೆ<br>7. ವಿದ್ಯುತ್ ನಿಗಮ, ಬಿ.ಬಿ.ಎಂ.ಪಿ. |

| | | |
|---|---|---|
| | | **<u>ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ:-</u>**<br>ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮವು ಜವಳಿ ಕ್ಷೇತ್ರದ ಮೂಲಭೂತ ಸೌಲಭ್ಯ ಅಭಿವೃದ್ಧಿಯ ಉದ್ದೇಶ ಹೊಂದಿರುತ್ತದೆ. ಆದಾಗ್ಯೂ ಶಿಕ್ಷಣ ಇಲಾಖೆಯ ವಿದ್ಯಾ ವಿಕಾಸ ಯೋಜನೆಯಡಿ ಸರಬರಾಜು ಆದೇಶವನ್ನು ಪಡೆದು ಸಮವಸ್ತ್ರ ಬಟ್ಟೆಯನ್ನು ಸರಬರಾಜು ಮಾಡಲಾಗುತ್ತಿದೆ. |

ಸಂಖ್ಯೆ: CI 185 JAKE 2021

(ಶಂಕರ ಬ ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು